ಹಂಚಿದ್ದಾರೆ. ಅದಕ್ಕಿಂತ ಹಿಂದೆ ಅವರಿಗೆ ಕೊಡತಕ್ಕಂಥ ಸಾಲ ಸವಲತ್ತುಗಳನ್ನು ಅವರ ಸಭೆಯಲ್ಲಿ ಹಂಚಿದ್ದಾರೆ. ಪತ್ರಿಕೆಯಲ್ಲಿ ಬಂದಿದೆ. ಏಕೆ ಈ ರೀತಿ ಮಾಡಿದ್ದಾರೆ ಎಂಬ ಬಗ್ಗೆ ಬಹಳ ಗಂಭೀರವಾಗಿ ಆಲೋಚನೆಯನ್ನು ಮಾಡಬೇಕು.

ಅಧ್ಯಕ್ಷರು: ಆಯಿತು.

ಡಾ: ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್: ಸಂಬಂಧಪಟ್ಟ ಅಧಿಕಾರಿ ಮೇಲೆ ಕ್ರಮ ತೆಗೆದುಕೊಳ್ಳಬೇಕು. This is too much.

Mr. SPEAKER: Give it in writing. ಈ ರೀತಿಯಾಗಿದೆಯೆಂದು ಬರವಣಿಗೆಯಲ್ಲಿ ಮಾಹಿತಿಯನ್ನು ಕೊಡಿ. We will proceed.

ಶ್ರೀ ಎಸ್. ಸುರೇಶ್‌ಕುಮಾರ್: ಮಾನ್ಯ ಅಧ್ಯಕ್ಷರೇ, ಮಾನ್ಯ ಪ್ರತಿಪಕ್ಷದ ನಾಯಕರು ಈಗ ಏನು ಹೇಳಿದ್ದಾರೆ, ಅದನ್ನು ನಾನು ನೂರಕ್ಕೆ ನೂರು ಒಪ್ಪಿಕೊಳ್ಳುತ್ತೇನೆ. ಈ ರೀತಿ ಪ್ರಮಾದಗಳು ಅಲ್ಲಲ್ಲಿ ಆಗುತ್ತಿರುವುದನ್ನು ನಾವು ಕೇಳುತ್ತಿದ್ದೇವೆ. ತಾವು ಇನ್ನೊಂದು ವಿಚಾರವನ್ನು ಹೇಳಿದಿರಿ, ಜಿಲ್ಲಾ ಉಸ್ತುವಾರಿ ಸಚಿವರು ಅವರನ್ನು ಕೇಳದೇ ಮಾಡುವ ಆಗಿಲ್ಲ, ಅವರು ದಿನಾಂಕ ನಿಶ್ಚಯ ಮಾಡುತ್ತಾರೆ, ಆಮೇಲೆ ಅವರನ್ನು ಕರೆಯುತ್ತಾರೆ ಎಂದು ಹೇಳಿದರು. ಮಾನ್ಯ ಜಯಚಂದ್ರರವರು ಇಲ್ಲಿಯೇ ಇದ್ದಾರೆ. ನಾನು ತುಮಕೂರಿನ ಉಸ್ತುವಾರಿ ಸಚಿವನಾಗಿರುವವರೆಗೂ ಒಂದೇ ಒಂದು ದಿವಸ ಆ ರೀತಿ ಆಗದಿರುವ ಹಾಗೆ ನೋಡಿಕೊಂಡಿದ್ದೇನೆ. ಆದರೂ ಕೂಡ ನೀವು ಏನು ವಿಚಾರ ಹೇಳಿದ್ದೀರಿ, ಅದನ್ನು ಗಮನದಲ್ಲಿಟ್ಟುಕೊಂಡು ಮತ್ತೇ ಮತ್ತೇ ಈ ಗೊಂದಲವಾಗಬಾರದು. ಇದು end ಆಗಬೇಕು ಎಂದು ಹೇಳಿದಿರಲ್ಲ, ಇದಕ್ಕೆ ಒಂದು ಅಂತಿಮ ಇತಿಶ್ರೀ ಹಾಡಬೇಕು. ಅದಕ್ಕೋಸ್ಕರ ನಾನು ಮಾನ್ಯ ಸಭಾಧ್ಯಕ್ಷರನ್ನು ಕೇಳಿಕೊಂಡಿದ್ದೇನೆ. ತಾವು 18ನೇ ತಾರೀಖಿನ ಮೊದಲೇ ಇದರ ಬಗ್ಗೆ ನಿರ್ಧಾರವಾಗಬೇಕೆಂದು ಏನು ಹೇಳಿದ್ದೀರಿ, ಆ ಒಂದು ಸಮಯದಲ್ಲೇ ಒಂದು ಸಭೆಯನ್ನು ಮಾಡಿ, ಆ ಸಭೆಗೆ ತಮ್ಮನ್ನು ಕರೆದು ಇದರ ಬಗ್ಗೆ ಒಂದು ಫೈನಲ್ ಆಗಿ decision ತೆಗೆದುಕೊಳ್ಳೋಣ.

ಅಧ್ಯಕ್ಷರು: 16ನೇ ತಾರೀಖು ಸಭೆ ಮಾಡೋಣ. ಪತ್ರ ಕಳುಹಿಸುತ್ತಾರೆ. ಈಗ ಮಾನ್ಯ ರಹೀಂ ಖಾನ್‌ರವರು ಗಮನ ಸೆಳೆಯಿರಿ. ಅವರು ಇಲ್ಲ. ಶ್ರೀ ಪ್ರತಾಪ ಗೌಡ ಪಾಟೀಲ್, ಶ್ರೀ ದೊಡ್ಡನಗೌಡ ಜಿ. ಪಾಟೀಲ್, ಶ್ರೀ ಜಯಚಂದ್ರರವರು ತಾವು ಗಮನ ಸೆಳೆಯಿರಿ.

(ಶ್ರೀ ಪ್ರತಾಪ್‌ಗೌಡ ಪಾಟೀಲ್ ಹಾಗೂ ಶ್ರೀ ದೊಡ್ಡನಗೌಡ ಜಿ. ಪಾಟೀಲ್ ಗೈರು ಹಾಜರು)

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಅಧ್ಯಕ್ಷರೇ, ಉತ್ತರ ಕೊಟ್ಟಿದ್ದಾರೆ, ಅವರು ಡಿಟೇಲ್ಸ್ ಬೇಕು ಎಂದು ಹೇಳಿದರು, ಆದ್ದರಿಂದ ಇದನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಟಿ.ಬಿ. ಜಯಚಂದ್ರ: ನಾಳೆ ತೆಗೆದುಕೊಳ್ಳುತ್ತೀರಾ?

ಅಧ್ಯಕ್ಷರು: ಅದನ್ನು ನಾಳೆ ತೆಗೆದುಕೊಳ್ಳೋಣ. ಈಗ ಶ್ರೀ ಎನ್. ಸಂಪಂಗಿಯವರೇ ನಿಮಗೆ ಸಂಬಂಧಪಟ್ಟ ವಿಚಾರಕ್ಕೆ ಮಾನ್ಯ ಮಂತ್ರಿಗಳು ನಾಳೆ ಉತ್ತರ ಕೊಡುತ್ತಾರಂತೆ. ಮಾನ್ಯ ಜನಾರ್ಧನ ರೆಡ್ಡಿಯವರು ಒಂದು ಪತ್ರ ಕೊಟ್ಟಿದ್ದಾರೆ. ನಾಳೆ ಉತ್ತರ ಕೊಡುತ್ತಾರೆ ಅಂತೆ. ಆಗಬಹುದಲ್ಲವೇ?

ಶ್ರೀ ಎನ್. ಸಂಪಂಗಿ: ನೀವು ಇದ್ದೀರಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೇ, ಮಾನ್ಯ ಜಯಚಂದ್ರರವರು ಒಂದು ಪ್ರಶ್ನೆ ಕೇಳಿದ್ದಾರೆ. ಅದರ ಬಗ್ಗೆ ಬೇಕಾದರೆ ಚರ್ಚೆ ಮಾಡಲಿ. ಏಕೆಂದರೆ ಪುಟ್ಟೇಗೌಡರು ....

ಅಧ್ಯಕ್ಷರು: ನಾಳೆ ಕೊಡುತ್ತೇನೆ.

ಶ್ರೀ ಹೆಚ್.ಡಿ. ರೇವಣ್ಣ: ಏಕೆಂದರೆ ಪುಟ್ಟೇಗೌಡರು ಪ್ರಸ್ತಾಪ ಮಾಡಬೇಕೆಂದಿರುವ ವಿಷಯ ಮತ್ತು ನಮ್ಮದು ಎರಡು ನನ್ನ ಕ್ಷೇತ್ರಕ್ಕೆ ಬರುತ್ತದೆ. ಅವರನ್ನು ಕರೆದುಕೊಂಡು ಬಂದು ಮಾಡಿಸಿಬಿಡೋಣ ಎಂದು ಕೇಳಬೇಕು. ಇಂತಹ ಒಳ್ಳೆಯ ಕೆಲಸಕ್ಕೆ ಅವರೇ ಬಂದುಬಿಡಲಿ ನಮ್ಮದೇನು ಅಭ್ಯಂತರವಿಲ್ಲ. ಏಕೆ reply ಬಂದಿಲ್ಲವೇ ಸ್ವಾಮಿ? ಕಾನೂನು ಸಚಿವರೇ reply ಬಂದಿದೆಯೋ ಇಲ್ಲವೋ ಎಂದು ಹೇಳಿ.

ಶ್ರೀ ಎಸ್. ಸುರೇಶ್ ಕುಮಾರ್: ಮಾನ್ಯ ಮಂತ್ರಿಗಳು ಇಲ್ಲ.

ಶ್ರೀ ಹೆಚ್.ಡಿ. ರೇವಣ್ಣ: ಮಂತ್ರಿಗಳು ಇಲ್ಲವೇ, ನಾಳೆ ಮಾಡಲಿ.

ಅಧ್ಯಕ್ಷರು: ಆಯಿತು, ನಾಳೆ ತೆಗೆದುಕೊಳ್ಳೋಣ. ಈಗ ಸದನವನ್ನು ನಾಳೆ ಬೆಳಿಗ್ಗೆ 10–00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನದ ಕಲಾಪವು ರಾತ್ರಿ 7–00 ಗಂಟೆ 42 ನಿಮಿಷಕ್ಕೆ ಮುಕ್ತಾಯಗೊಂಡು ಮತ್ತೆ ದಿನಾಂಕ 08.03.2011ರಂದು ಮಂಗಳವಾರ ಬೆಳಿಗ್ಗೆ 10–00 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು)